

## ಹುಟ್ಟುಹಬ್ಬ, ಸಪ್ತಪದಿ ಹಾಗೂ ಸಿನಿಮಾ!

ಹೊಸ ಚಿತ್ರದ ಮುಹೂರ್ತದೊಂದಿಗೆ ಕಳೆದ ವಾರ ರಾಗಿಣಿ ತಮ್ಮ ಹುಟ್ಟುಹಬ್ಬ ಆಚರಿಸಿಕೊಂಡರು. ಹುಟ್ಟುಹಬ್ಬದಂದೇ ಅವರು ಹಸೆಮಣೆಯನ್ನೂ ತುಳಿದರು. ಇದು ಸಿನಿಮಾಕ್ಕಾಗಿ ನಡೆದ ಮದುವೆ ಸಂಭ್ರಮ.

ರಾಗಿಣಿ ಅವರಿಗಾಗಿ 'ನಾನೇ ನೆಕ್ಸ್ಟ್ ಸಿಎಂ' ಚಿತ್ರ ನಿರ್ದೇಶಿಸಿರುವ ಮುಸ್ಸಂಜೆ ಮಹೇಶ್, ಈಗ ಸೆಟ್ಟೇರಿರುವ ಸಿನಿಮಾದ ನಿರ್ದೇಶಕರೂ ಹೌದು. ಈಗಾಗಲೇ ಸಿದ್ಧವಾಗಿರುವ ಚಿತ್ರವನ್ನು ತೆರೆಕಾಣಿಸುವ ತವಕದಲ್ಲಿರುವ ಅವರು, ತನ್ನ ನೆಚ್ಚಿನ ನಟಿಯ ಮತ್ತೊಂದು ಚಿತ್ರದ ಮುಹೂರ್ತವನ್ನೂ ನಡೆಸಿದ್ದಾರೆ. ಇಷ್ಟುಮಾತ್ರವಲ್ಲ, ರಾಗಿಣಿ ಅವರಿಗಾಗಿ ಮತ್ತೊಂದು ಸಿನಿಮಾ ರೂಪಿಸುವ ಸಿದ್ಧತೆಯಲ್ಲೂ ಅವರು ತೊಡಗಿಕೊಂಡಿದ್ದಾರೆ.

ಮಹೇಶ್ ನಿರ್ದೇಶನದ ಹೊಸ ಚಿತ್ರದ ಮೊದಲ ದೃಶ್ಯ ಮದುವೆಗೆ ಸಂಬಂಧಿಸಿದ್ದು. ಆದಿತ್ಯ ಹಾಗೂ ರಾಗಿಣಿ ಮದುಮಕ್ಕಳ ಪೋಷಾಕಿನಲ್ಲಿ ಕಂಗೊಳಿಸುತ್ತಿದ್ದರು. ಇಬ್ಬರೂ ಸಪ್ತಪದಿ ತುಳಿದರು. ಆದಿತ್ಯ ನವವಧುವಿಗೆ ಅರುಂಧತಿ ನಕ್ಷತ್ರ ತೋರಿಸಿದರು. ಇಬ್ಬರೂ ಸೆಲ್ಫಿ ತೆಗೆದುಕೊಂಡರು. 'ರೀಲ್ ಮದುವೆಯ ಪೋಷಾಕಿನಲ್ಲಿ ಸೊಗಸಾಗಿ ಕಾಣುತ್ತಿದ್ದೀರಿ. ನಿಜವಾದ ಮದುವೆ ಯಾವಾಗ?' ಎನ್ನುವ ಪ್ರಶ್ನೆಗೆ ರಾಗಿಣಿ ನಗುನಗುತ್ತಲೇ 'ಸದ್ಯಕ್ಕಂತೂ ಇಲ್ಲ' ಎಂದರು.

2016ರಲ್ಲಿ ರಾಗಿಣಿ ಸಿನಿಮಾಗಳ ಬರ ಎದುರಿಸಿದ್ದರು. ಆ ಕೊರತೆ 2017ರಲ್ಲಿ ನೀಗುವಂತಿದೆ. 'ನಾನೇ ನೆಕ್ಸ್ಟ್ ಸಿಎಂ' ಚಿತ್ರದ ಜೊತೆಗೆ 'ಗಾಂಧಿಗಿರಿ' ಹೆಸರಿನ ರಾಗಿಣಿ ಅವರ ಮತ್ತೊಂದು ಚಿತ್ರವೂ ತೆರೆ ಕಾಣುವ ಹಂತದಲ್ಲಿದೆ. ಕಳೆದ ವರ್ಷ ಸೆಟ್ಟೇರಿದ್ದ 'ಅಮ್ಮ' ಸಿನಿಮಾದ ಚಿತ್ರೀಕರಣಕ್ಕೆ ಸದ್ಯದಲ್ಲೇ ಚಾಲನೆ ದೊರೆಯಲಿದೆಯಂತೆ.

## ಪ್ರೇಮಗುಲಾಬಿಯ ಕಲರವ

ಇತ್ತೀಚಿನ ದಿನಗಳಲ್ಲಿ ಗ್ರಾಮೀಣ ಬದುಕಿನ ಕಥೆಗಳತ್ತ ಕನ್ನಡ ಚಿತ್ರರಂಗ ಹೆಚ್ಚು ಆಸಕ್ತಿ ವ್ಯಕ್ತಪಡಿಸುತ್ತಿದೆ. ಈ ಸಾಲಿಗೆ ಹೊಸ ಸೇರ್ಪಡೆ 'ಈ ಕಲರವ'. ಹಳ್ಳಿಬದುಕಿನ ನೈಜಕಥೆಯನ್ನು ಹೊಂದಿರುವ ಈ ಚಿತ್ರದಲ್ಲಿ ಹಾಸ್ಯ ಹಾಸುಹೊಕ್ಕಾಗಿದೆ ಎಂದು ಚಿತ್ರತಂಡ ಹೇಳುತ್ತಿದೆ.



ತೆರೆಗೆ ಸಿದ್ಧವಾಗಿರುವ 'ಈ ಕಲರವ' ಚಿತ್ರದ ನಿರ್ದೇಶನ ಸಂದೀಪ್ ದಕ್ಷ ಅವರದು. ಕಥೆ, ಚಿತ್ರಕಥೆ, ಸಂಭಾಷಣೆ ಕೂಡ ಅವರದೇ. ಈ ಮೊದಲು 'ಬಿಕೋ' ಎನ್ನುವ ಚಿತ್ರ ನಿರ್ದೇಶಿಸಿದ್ದ ಅವರು, ಈಗ ಹೊಸ ಬಗೆಯ ಸದ್ದು ಮಾಡಲು ಹೊರಟಿದ್ದಾರೆ. ತಮ್ಮ ಚಿತ್ರದ ಕಥೆ ವಿಶಿಷ್ಟವಾಗಿದೆ ಹಾಗೂ ಸುಲಭ ಊಹೆಗೆ ನಿಲುಕದಂತಿದೆ ಎನ್ನುವುದು ಅವರ ಅನಿಸಿಕೆ.

ಪ್ರೀತಿ ಹಾಗೂ ಮಾಫಿಯಾದ ಎಳೆಗಳು ಕಥೆಯಲ್ಲಿವೆಯಂತೆ. ವಿಷಮ ಸನ್ನಿವೇಶದಲ್ಲಿ ಅರಳುವ ಪ್ರೇಮ ಚಿತ್ರಕಥೆಯ ಕೇಂದ್ರಬಿಂದು. ಸ್ಮಶಾನದಲ್ಲಿನ ಮೂಳೆಗಳನ್ನು ಕದ್ದು ಮಾರುವವರ ಕುರಿತು ಸಿನಿಮಾ ಗಮನಸೆಳೆಯುತ್ತದಂತೆ. ರಕ್ತಪಾತ ಹಾಗೂ ಅಪರಾಧದ ಘಟನೆಗಳು ಕೂಡ ಚಿತ್ರದಲ್ಲಿವೆಯಂತೆ. ಹೀಗೆ ತುಣುಕು ತುಣುಕು ವಿವರಗಳನ್ನು ನೀಡುವ ಮೂಲಕ ಸಂದೀಪ್ ತಮ್ಮ ಸಿನಿಮಾದ ಬಗ್ಗೆ ಕುತೂಹಲ ಮೂಡಿಸುತ್ತಾರೆ.

ಕುಮಾರ್ ಛಾಯಾಗ್ರಹಣದಲ್ಲಿ 'ಈ ಕಲರವ'ದ ಬಹುತೇಕ ಚಿತ್ರೀಕರಣ ಕೆ.ಆರ್. ನಗರ ತಾಲ್ಲೂಕಿನ ತಿಪ್ಪೂರು ಎನ್ನುವ ಗ್ರಾಮದಲ್ಲಿ ನಡೆದಿದೆ. ನವೀನ್‌ಕೃಷ್ಣ ಹಾಗೂ ರೋಹಿಣಿ ಚಿತ್ರದ ನಾಯಕ–ನಾಯಕಿ ಚ. ರಶ್ಮಿ, ಮೈಸೂರು ಶೋಭಾ, ನಿಹಾರಿಕಾ, ಮಹಾದೇವೇಗೌಡ, ಸಂತೋಷ್ ಹಾಗೂ ಪ್ರಿಯಾ ತಾರಾಗಣದಲ್ಲಿರುವ ಪ್ರಮುಖರು. ಈಗಾಗಲೇ ಚಿತ್ರದ ಗೀತೆಗಳ ಧ್ವನಿಮುದ್ರಿಕೆ ಬಿಡುಗಡೆಯಾಗಿದ್ದು, ಈಗ ಸಿನಿಮಾವನ್ನು ತೆರೆ ಕಾಣಿಸಲು ನಿರ್ಮಾಪಕ ಮಹಾದೇವಗೌಡ ಪ್ರಯತ್ನಿಸುತ್ತಿದ್ದಾರೆ.

